

# ಸಂಶೋಧನಾ ಗುಣಮಟ್ಟ ಕಳಪೆಗೆ ಏನು ಕಾರಣ?

ನಮ್ಮ ದೇಶದಲ್ಲಿನ ಸಮಾಜ ವಿಜ್ಞಾನ ಕ್ಷೇತ್ರದ ಸಂಶೋಧನಾ ಗುಣಮಟ್ಟದ ಕುರಿತು ಅಪಸ್ವರ ಎದ್ದಿರುವ ಬಗ್ಗೆ ಇತ್ತೀಚೆಗೆ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗುತ್ತಲೇ ಇರುತ್ತವೆ. ವಿಶ್ವವಿದ್ಯಾನಿಲಯ ಅನುದಾನ ಮಂಡಳಿ (ಯು.ಜಿ.ಸಿ)ಯು ಸಂಶೋಧನಾ ಕ್ಷೇತ್ರಕ್ಕೆಂದೇ ಕೋಟಿಗಟ್ಟಲೆ ಹಣವನ್ನು ವ್ಯಯ ಮಾಡುತ್ತಿದ್ದರೂ, ಭಾರತದಲ್ಲಿ ನಡೆಯುತ್ತಿರುವ ಬಹುತೇಕ ಸಂಶೋಧನೆಗಳು ಕೇವಲ ಪದವಿ ಪ್ರಮಾಣಪತ್ರವನ್ನು ಪಡೆಯುವ ಉದ್ದೇಶವನ್ನು ಹೊಂದಿವೆ ಎಂಬಂತಹ ಆತಂಕವು ಈ ವರದಿಗಳಲ್ಲಿ ವ್ಯಕ್ತವಾಗಿವೆ. ಇದರಿಂದಾಗಿ ಈ ಸಂಶೋಧನೆಗಳು ಕಳಪೆ ಗುಣಮಟ್ಟದವುಗಳಾಗಿವೆ. ಏಕೆ ಹೀಗೆ? ಸಮಾಜ ವಿಜ್ಞಾನಗಳ ಸಂಶೋಧನೆಯಲ್ಲಿ ಸಂಶೋಧನಾಯೋಗ್ಯ ಸಮಸ್ಯೆಯ ಆಯ್ಕೆ ಮತ್ತು ಸೈದ್ಧಾಂತಿಕ ಚರ್ಚೆಯು ಸಂಪೂರ್ಣವಾಗಿ ನಿಂತುಹೋಗಿರುವುದೇ ಸಂಶೋಧನಾ ಗುಣಮಟ್ಟ ಕಳಪೆಯಾಗುತ್ತಿರಲು ಪ್ರಮುಖ ಕಾರಣ.

ಸಮಾಜ ವಿಜ್ಞಾನಗಳ ಸಂಶೋಧನಾ ವಿದ್ಯಾರ್ಥಿಗಳಾದ ನಮಗೆ ಮೊದಲಿಗೆ ಅನ್ನಿಸಿದ್ದು ಇದು. ನೈಸರ್ಗಿಕ ವಿಜ್ಞಾನಗಳಲ್ಲಾದರೆ, ಅತ್ಯಾಧುನಿಕ ಉಪಕರಣಗಳ ಅವಶ್ಯಕತೆ ಇರುತ್ತದೆ. ಆ ಉಪಕರಣಗಳು ದಿನದಿಂದ ದಿನಕ್ಕೆ ಆಧುನೀಕರಣಗೊಳ್ಳುತ್ತಿರುವುದರ ಜೊತೆಗೆ ಬೆಲೆಗಳು ದುಬಾರಿಯಾಗುತ್ತಿರುವುದರಿಂದ ವಿಶ್ವವಿದ್ಯಾನಿಲಯಗಳಿಗೆ ಅವುಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನೈಸರ್ಗಿಕ ವಿಜ್ಞಾನಗಳಲ್ಲಿನ ಸಂಶೋಧನೆಗಳ ಗುಣಮಟ್ಟವು ಕುಂಠಿತಗೊಳ್ಳುತ್ತಿರಬಹುದು ಎಂದುಕೊಂಡೆವು. ಆದರೆ ಸಮಾಜ ವಿಜ್ಞಾನಗಳಲ್ಲಿ ಈ ರೀತಿಯ ಸಮಸ್ಯೆಗಳೇನೂ ಇಲ್ಲವಲ್ಲ. ಆದರೂ ಹೀಗೇಕೆ? ಇಲ್ಲ. ಸಮಾಜದ ಕುರಿತಾದ ಯಾವುದಾದರೂ ಒಂದು ವಿಷಯವನ್ನು ಆಯ್ಕೆ ಮಾಡಿಕೊಂಡು, ಅದಕ್ಕೆ ಸಂಬಂಧಿಸಿದಂತೆ ಪ್ರಶ್ನಾವಳಿಯನ್ನು ರಚಿಸಿ, ಕ್ಷೇತ್ರಾಧ್ಯಯನ ನಡೆಸಿದ ಮಾಹಿತಿಯನ್ನು ವಿಶ್ಲೇಷಿಸಿದರೆ ಆಯಿತಲ್ಲ ಎಂದುಕೊಂಡಿದ್ದೆವು. ಆದರೆ ಕ್ಷೇತ್ರಾಧ್ಯಯನ ಮಾಹಿತಿಯನ್ನು ವಿಶ್ಲೇಷಿಸುವುದೇ ಒಂದು ಸಮಸ್ಯೆ ಎಂಬುದು ನಮಗೆ ತಿಳಿದಿರಲಿಲ್ಲ. ಸಾಮಾನ್ಯವಾಗಿ ಭಾಷೆಯ ಮೇಲೆ ಪಾಂಡಿತ್ಯ ಇಲ್ಲದಿರುವುದೂ ಸಂಶೋಧನಾ ಗುಣಮಟ್ಟ ಕುಂಠಿತವಾಗಲು ಕಾರಣವೆಂದು ಭಾವಿಸಿದ್ದೆವು. ಅಂದರೆ ನಾವು ಆಯ್ಕೆ ಮಾಡಿಕೊಂಡ ವಿಷಯದ ಕುರಿತ ಸಾಹಿತ್ಯವನ್ನು ಸಂಗ್ರಹಿಸುವಾಗ ಹಾಗೂ ಅವುಗಳ ವಿಮರ್ಶೆಯನ್ನು ಮಾಡುವಾಗ ಕೆಲವು ಇಂಗ್ಲಿಷ್ ಪುಸ್ತಕಗಳನ್ನು ಅವಲಂಬಿಸಬೇಕಾಗುತ್ತದೆ. ಇಂಗ್ಲಿಷ್ ಭಾಷೆಯಲ್ಲಿ ಪಕ್ವತೆ ಇಲ್ಲದಿರುವುದರಿಂದಾಗಿ ಸಂಶೋಧಕರಿಗೆ ಕಷ್ಟವಾಗುತ್ತಿರಬಹುದು. ಆದ್ದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಸಂಶೋಧನಾ ವಿಷಯದ ಕುರಿತಂತೆ ನಡೆಯುತ್ತಿರುವ ಚರ್ಚೆಯನ್ನು ಗ್ರಹಿಸಲು ಸಾಧ್ಯವಾಗದೆ ಒಂದು ಉತ್ತಮ ಸಂಶೋಧನಾ ಪ್ರಬಂಧವನ್ನು ರಚಿಸಲಾಗುವುದಿಲ್ಲ ಎಂದುಕೊಂಡಿದ್ದೆವು. ಆದರೆ ಇದು ಮಾತ್ರವೇ ಕಾರಣವಲ್ಲ ಎಂದು ನಮಗೆ ತಿಳಿಯಲು ಹೆಚ್ಚು ಸಮಯ ಹಿಡಿಯಲಿಲ್ಲ. ಏಕೆಂದರೆ ಇತ್ತೀಚೆಗೆ ಇಂಗ್ಲಿಷ್ ಸ್ಕೂಲುಗಳು ಹಾಗೂ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗುತ್ತಿದೆ ಎಂಬುದು ಎಲ್ಲರಿಗೂ ತಿಳಿದಿದ್ದೇ. ಇಂಗ್ಲಿಷ್ ಸರಿಯಾಗಿ ಬಾರದಿದ್ದುದು ನಿಜವಾಗಿಯೂ ಸಂಶೋಧನಾ ಗುಣಮಟ್ಟ ಕುಗ್ಗಲು ಪ್ರಮುಖ ಕಾರಣವಾಗಿದ್ದೇ ಹೌದಾದರೆ, ಇಂಗ್ಲಿಷ್ ಬಳಕೆ ಹೆಚ್ಚಾದಂತೆ ಸಂಶೋಧನಾ ಗುಣಮಟ್ಟದಲ್ಲಿಯೂ ಸುಧಾರಣೆಯನ್ನು ಕಾಣಬೇಕಾಗಿತ್ತು. ಆದರೆ ಹಾಗಾಗುತ್ತಿಲ್ಲವಲ್ಲ. ಹಾಗೆಂದು ಸಂಶೋಧನೆಯಲ್ಲಿ ಇಂಗ್ಲಿಷ್‌ನ ಪಾತ್ರ ನಗಣ್ಯವೆಂದೇನೂ ನಾವು ಹೇಳುತ್ತಿಲ್ಲ. ಆದರೆ ಸಂಶೋಧನಾ ಗುಣಮಟ್ಟ ಕಳಪೆಯಾಗುತ್ತಿರಲು ನಿಜವಾದ ಕಾರಣಗಳೇನು? ಎಂಬುದು ಗೊತ್ತಾಗಲೇ ಇಲ್ಲ. ಅವು ಗೊತ್ತಾದರೆ ಮಾತ್ರ ಸಂಶೋಧನೆಗಳಲ್ಲಿ ಸುಧಾರಣೆ ಸಾಧ್ಯವಲ್ಲವೇ?

> **ಸಮಾಜ ವಿಜ್ಞಾನಗಳ ಸಂಶೋಧನೆಯಲ್ಲಿ ಸಂಶೋಧನಾಯೋಗ್ಯ ಸಮಸ್ಯೆಯ ಆಯ್ಕೆ ಮತ್ತು ಸೈದ್ಧಾಂತಿಕ ಚರ್ಚೆಯು ಸಂಪೂರ್ಣವಾಗಿ ನಿಂತುಹೋಗಿರುವುದೇ ಸಂಶೋಧನಾ ಗುಣಮಟ್ಟ ಕಳಪೆಯಾಗುತ್ತಿರಲು ಪ್ರಮುಖ ಕಾರಣ.**

ಪ್ರವೀಣ ಟಿ. ಎಲ್
ಸಂತೋಷ್ ಕುಮಾರ್
ನಾಗಶಿಲ್ಪ ಪಿ. ಎಸ್

ಇಂತಹ ಪ್ರಶ್ನೆಗಳು ನಮ್ಮನ್ನು ಸುತ್ತುವರಿದಿದ್ದ ಸಂದರ್ಭದಲ್ಲಿಯೇ ಕುವೆಂಪು ವಿಶ್ವವಿದ್ಯಾನಿಲಯದ 'ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ'ವು ಸರ್ ರತನ್ ಟಾಟಾ ಟ್ರಸ್ಟ್‌ನ ಪ್ರಾಯೋಜಕತ್ವದಲ್ಲಿ ಏರ್ಪಡಿಸಿದ ಸಂಶೋಧನಾ ವಿಧಾನಗಳ ಕುರಿತ ನಾಲ್ಕು ಕಾರ್ಯಾಗಾರಗಳ ಸರಣಿಯಲ್ಲಿ ಭಾಗವಹಿಸಿದೆವು. ಅಲ್ಲಿ ಸಂಶೋಧನೆಯ ಕುರಿತ ನಮ್ಮ ಅರಿವು ಎಷ್ಟು ಸಂಕುಚಿತವಾದುದು ಎಂದು ತಿಳಿಯಿತು. ನಾವು ಆ ಕಾರ್ಯಗಾರಗಳಲ್ಲಿ ಭಾಗವಹಿಸುವಾಗ ಕೆಲವು ನಿರೀಕ್ಷೆಗಳನ್ನಿಟ್ಟುಕೊಂಡಿದ್ದೆವು. ಆ ನಿರೀಕ್ಷೆಗಳೂ ಅಷ್ಟೇ ಸಂಕುಚಿತವಾಗಿದ್ದವು. ಅಂದರೆ ನಾವು ಕಾರ್ಯಾಗಾರವೆಂದರೆ, ಯಾರೋ ಒಂದಿಷ್ಟು ಜನ ಸಂಪನ್ಮೂಲ ವ್ಯಕ್ತಿಗಳು ಸಂಶೋಧನೆ ಎಂದರೇನು ಎಂಬುದರ ಕುರಿತು ಇದುವರೆಗೂ ಪುಸ್ತಕಗಳಲ್ಲಿ ಹೇಳಿರುವುದನ್ನೇ ಪುನರುಚ್ಚರಿಸುತ್ತಾರೇನೋ ಎಂದುಕೊಂಡಿದ್ದೆವು. ಅಂದರೆ ಸಂಶೋಧನಾ ಸಮಸ್ಯೆ, ಪ್ರಾಕ್-ಕಲ್ಪನೆ, ಉದ್ದೇಶ, ವೈಧಾನಿಕತೆ ಇತ್ಯಾದಿ ವಿಚಾರಗಳ ಕುರಿತು ಭಾಷಣ ಮಾಡುವರೆಂದು ತಿಳಿದಿದ್ದೆವು. ಆದರೆ ಈ ಕಾರ್ಯಾಗಾರಗಳ ಸ್ವರೂಪವೇ ವಿಭಿನ್ನವಾಗಿತ್ತು.

ಈ ಕಾರ್ಯಾಗಾರಗಳಲ್ಲಿ ಮುಖ್ಯವಾಗಿ ಯಾವ ರೀತಿಯಲ್ಲಿ ಪುಸ್ತಕ, ಲೇಖನಗಳನ್ನು ಓದಬೇಕು? ಅವುಗಳನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಆ ಬರಹಗಳಲ್ಲಿನ ಪ್ರಮುಖ ವಾದಗಳನ್ನು ಗುರುತಿಸುವುದು ಹೇಗೆ? ಅವುಗಳ ಪರಿಣಾಮಗಳ ಕುರಿತು ಯೋಚಿಸುವ ಬಗೆ ಹೇಗೆ? ಎಂಬ ಮೂಲಭೂತ ವಿಚಾರಗಳಿಂದ ಆರಂಭಿಸಿ, ಸಮಾಜ ವಿಜ್ಞಾನಗಳಲ್ಲಿ ಯಾವ ತರಹದ ಸಮಸ್ಯೆಗಳನ್ನು ಸಂಶೋಧನೆಗೆ ತೆಗೆದುಕೊಳ್ಳಬೇಕು? ಒಂದು ಶೈಕ್ಷಣಿಕ ವಾತಾವರಣ ಹೇಗೆ ಇರಬೇಕಾಗುತ್ತದೆ? ಸಂಶೋಧನೆಯು ಕೇವಲ ಪದವಿಗೋಸ್ಕರವೇ? ಎಂಬಿತ್ಯಾದಿ ವಿಚಾರಗಳ ಕುರಿತು ನಾವೇ ಸ್ವತಃ ಆಳವಾಗಿ ಮತ್ತು ಸೂಕ್ಷ್ಮವಾಗಿ ಆಲೋಚಿಸುವಂತೆ ಮಾಡಿದರು. ಅಂದರೆ ಈ ಮೇಲಿನ ಎಲ್ಲಾ ವಿಚಾರಗಳನ್ನು ಕೇವಲ ಉಪನ್ಯಾಸ ನೀಡುವ ಮಾದರಿಯಲ್ಲಿ ಹೇಳಿಕೊಡದೆ, ಕನ್ನಡದ ಕೆಲವೊಂದು ಸರಳ ಲೇಖನಗಳನ್ನು ಆಯ್ಕೆ ಮಾಡಿಕೊಂಡು, ಅವುಗಳ ವಸ್ತುವಿಷಯಗಳನ್ನಿಟ್ಟುಕೊಂಡು ಸಂಪನ್ಮೂಲ ವ್ಯಕ್ತಿಗಳ ಜೊತೆಜೊತೆಗೆ ನಮ್ಮನ್ನು ಆಲೋಚನೆಯಲ್ಲಿ ತೊಡಗುವಂತೆ ಹಾಗೂ ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಇಲ್ಲಿ ಮುಖ್ಯವಾಗಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೀರ್ತಿನಾಥ ಕುರ್ತಕೋಟಿ, ಡಿ.ವಿ. ಗುಂಡಪ್ಪರವರು ಬರೆದಿದ್ದ ಅವರ ಸೂಕ್ಷ್ಮ ಒಳನೋಟಗಳನ್ನು ಹೊಂದಿದ್ದ ಲೇಖನಗಳನ್ನು ಬಳಸಲಾಗಿತ್ತು. ಸಂಶೋಧನಾ ವಿಧಿವಿಧಾನ ಎಂಬ ತಲೆಬರಹವನ್ನು ಹೊಂದಿದ್ದ ಈ ಕಾರ್ಯಾಗಾರಕ್ಕೂ ಇಂತಹ ಚಿಕ್ಕಪುಟ್ಟ ಲೇಖನಗಳಿಗೂ ಏನು ಸಂಬಂಧ ಎಂಬುದು ಮೊದಲಿಗೆ ತಿಳಿಯಲೇ ಇಲ್ಲ. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಬಹುತೇಕ ಸಂಶೋಧನಾರ್ಥಿಗಳು ಆಶ್ಚರ್ಯಚಕಿತರಾಗಿಯೇ ಕುಳಿತಿದ್ದೆವು. ಏಕೆಂದರೆ ಸಂಶೋಧನಾ ವಿಧಾನದ ಕುರಿತು ದೊಡ್ಡ ದೊಡ್ಡ ಕೃತಿಗಳನ್ನೋ ಅಥವಾ ಇಂಗ್ಲಿಷ್ ಭಾಷೆಯ ಕಠಿಣವಾದ ಕೆಲವಾರು ಪುಸ್ತಕಗಳನ್ನೋ ಕುರಿತು ಭಾಷಣ ಮಾಡುತ್ತಾರೆಂಬ ನಿರೀಕ್ಷೆಯಲ್ಲಿದ್ದ ನಮಗೆಲ್ಲಾ ಇಂತಹ ಚಿಕ್ಕ ಚಿಕ್ಕ ಲೇಖನಗಳನ್ನು ಅದೂ ಕನ್ನಡದಲ್ಲಿರುವ ಲೇಖನಗಳನ್ನು ನೋಡಿ ಒಂದೆಡೆ ಖುಷಿಯಾದರೆ, ಇನ್ನೊಂದೆಡೆ ದಿಗ್ಭ್ರಮೆಯಾಯಿತು. ಈ ಲೇಖನಗಳೆಲ್ಲಾ ನಮಗೆ ಸುಲಭವಾಗಿ ಅರ್ಥವಾಗುತ್ತವೆ. ಕೆಲವೇ ಕೆಲವು ನಿಮಿಷಗಳಲ್ಲಿ ಓದಿ ಮುಗಿಸಬಹುದು ಎಂಬ ಹುಮ್ಮಸ್ಸಿನಲ್ಲಿ ಎಲ್ಲರೂ ಇದ್ದೆವು. ಆದರೆ ತದನಂತರ ತಿಳಿಯಿತು ಲೇಖನ ಅಥವಾ ಪುಸ್ತಕಗಳನ್ನು ಓದುವಾಗ ಭಾಷೆಗಿಂತ ದೊಡ್ಡ ತೊಡಕು ನಾವು ಅವುಗಳನ್ನು ಅರ್ಥೈಸಿಕೊಳ್ಳುವ ರೀತಿಯೇ ಆಗಿದೆ ಎಂದು.



ಆ ಲೇಖನಗಳನ್ನು ಸೂಕ್ಷ್ಮವಾಗಿ ಓದಿದ ನಂತರ ಇಂತಹ ಸರಳ ಮತ್ತು ಚಿಕ್ಕ ಬರವಣಿಗೆಗಳಲ್ಲಿಯೂ ಎಂತಹ ಗಹನವಾದ ವಿಚಾರಗಳು ವ್ಯಕ್ತವಾಗಿವೆ ಎಂದೆನಿಸಿತು. ಲೇಖಕರು ಎತ್ತಿದ ವಿಚಾರಗಳು ನಿಜವಾಗಿಯೂ ಸಮಾಜ ವಿಜ್ಞಾನಗಳಲ್ಲಿನ ಸಂಶೋಧನೆಗೆ ಯೋಗ್ಯವಾದಂತಹ ಸಮಸ್ಯೆಗಳಾಗಿದ್ದವು. ಆದ್ದರಿಂದ ಸಂಶೋಧನೆ ಮಾಡುವುದೆಂದರೆ ಕೆಲವು ಕಷ್ಟದ ಇಂಗ್ಲಿಷ್ ಪಠ್ಯಗಳನ್ನು ಓದಿ ಮಾಹಿತಿ ಸಂಗ್ರಹಿಸುವುದಲ್ಲ. ಬದಲಾಗಿ ಒಂದು ಉತ್ತಮ ಸಂಶೋಧನಾ ಸಮಸ್ಯೆಯನ್ನು ಕಂಡುಕೊಳ್ಳುವುದು. ಹಾಗಾದರೆ ಆ ಲೇಖನಗಳಲ್ಲಿ ವ್ಯಕ್ತವಾದ ಪ್ರಮುಖ ವಿಚಾರವಾದರೂ ಏನು? ದಿನನಿತ್ಯ ಮಾತನಾಡುವಾಗ ಅಥವಾ ಏನನ್ನಾದರೂ ನಿರೂಪಣೆಗೆ ಒಳಪಡಿಸುವ ಸಂದರ್ಭದಲ್ಲಿ ನಾವು ಹಲವಾರು ಪರಿಕಲ್ಪನೆಗಳನ್ನು ಬಳಸುತ್ತೇವೆ. ಆ ಪರಿಕಲ್ಪನೆಗಳು ನಮಗೆ ಅರ್ಥವಾಗಿವೆ ಮತ್ತು ಅವುಗಳು ನಾವು ನಿರೂಪಣೆಗೆ ಒಳಪಡಿಸಿದ ವಸ್ತುವನ್ನು ಬೇರೆಯವರಿಗೆ ಅರ್ಥವಾಗುವಂತೆ ಮಾಡುತ್ತವೆ ಎಂದು ಭಾವಿಸಿರುತ್ತೇವೆ. ಅಂದರೆ ಅಂತಹ ಪರಿಕಲ್ಪನೆಗಳು ನಮ್ಮ ಜೀವನಪದ್ಧತಿಯನ್ನು ಸರಿಯಾಗಿ ಅರ್ಥೈಸುತ್ತವೆ ಎಂದುಕೊಂಡಿರುತ್ತೇವೆ. ಆದರೆ ನಿಜವಾಗಿಯೂ ನಾವು ಅಂದುಕೊಂಡಂತೆ ಆಗುತ್ತದೆಯೇ? ಎಂಬ ಪ್ರಶ್ನೆಯನ್ನು ಆ ಲೇಖನಗಳು ಫ್ಯೂಡಲಿಸಂ, ಲಿಬರಲಿಸಂ ಇತ್ಯಾದಿ ಪರಿಕಲ್ಪನೆಗಳ ವಿಚಾರವಾಗಿ ಎತ್ತುತ್ತವೆ. ಲೇಖಕರು ಇದಕ್ಕೆ ನೀಡಿದ ಉತ್ತರವೆಂದರೆ, ಈ ಪರಿಕಲ್ಪನೆಗಳು ನಮ್ಮ ತಿಳುವಳಿಕೆಗೆ ಸಂಬಂಧಿಸಿದಂತವುಗಳಾಗಿದ್ದು, ಅವುಗಳ ಹುಟ್ಟು ಬೇರೆ ಸಂಸ್ಕೃತಿಯ ಜೀವನ ಪದ್ಧತಿಯೊಂದಿಗೆ ತಳುಕು ಹಾಕಿಕೊಂಡಿರುತ್ತವೆ. ಬೇರೆ ಬೇರೆ ಸಂಸ್ಕೃತಿಗಳ ನಡುವೆ ಅಗಾಧವಾದ ವ್ಯತ್ಯಾಸವಿರುವುದು ನಿಜವೇ ಆದಲ್ಲಿ, ಬೇರೆ ಸಂಸ್ಕೃತಿಯ ಜೀವನ ಪದ್ಧತಿಯನ್ನು ಸೂಚಿಸುವ ಈ ಪರಿಕಲ್ಪನೆಗಳು ನಮ್ಮ ಸಂಸ್ಕೃತಿಯ ಜೀವನ ಪದ್ಧತಿಗಳನ್ನು ಸರಿಯಾಗಿ ಅರ್ಥೈಸಲು ಸಾಧ್ಯವೇ? ಆದ್ದರಿಂದ ನಮ್ಮ ಮಾತುಗಳಲ್ಲಿ ಹಾಗೂ ನಿರೂಪಣೆಗಳಲ್ಲಿ ಬಳಸುವ ಪದಗಳು ಮತ್ತು ಪರಿಕಲ್ಪನೆಗಳು ನಮ್ಮ ಸಂಸ್ಕತಿಯ ಜೀವನವಿಧಾನವನ್ನು ಪ್ರತಿನಿಧಿಸುವಂತಿರಬೇಕು. ಈ ವಿಚಾರವು ಸಂಶೋಧನಾ ಗುಣಮಟ್ಟ ಕಳಪೆಯಾಗುತ್ತಿರಲು ನಿಜವಾದ ಕಾರಣಗಳೇನು? ಎಂಬ ನಮ್ಮ ಈ ಮುಂಚಿನ ಪ್ರಶ್ನೆಗೆ ಒಂದು ಸಾಧ್ಯವಿರುವ ಉತ್ತರ(ಪಾಸಿಬಲ್ ಆನ್ಸರ್)ದ ಮುನ್ಸೂಚನೆಯನ್ನು ನೀಡಿತು.

ಈ ಕಾರ್ಯಾಗಾರಗಳಿಗೆ ಆಗಮಿಸಿದ ಸಂಪನ್ಮೂಲ ವ್ಯಕ್ತಿಗಳ ಜೊತೆಗಿನ ಚರ್ಚೆಯಲ್ಲಿ ಹೊರಹೊಮ್ಮಿದ ವಿಚಾರಗಳು ನಮ್ಮ ಪ್ರಶ್ನೆಗೆ ಉತ್ತರವಾಗಬಹುದೇನೋ.. ಸಮಾಜ ವಿಜ್ಞಾನಗಳ ಸಂಶೋಧನೆಗಳು ಹಲವಾರು ಪರಿಕಲ್ಪನೆಗಳನ್ನು (ಉದಾಹರಣೆಗೆ ಕೋಮುವಾದ, ಜಾತ್ಯತೀತವಾದ, ಊಳಿಗಮಾನ್ಯಪದ್ಧತಿ, ಉದಾರವಾದ...) ಪರೀಕ್ಷೆಗೆ ಒಳಪಡಿಸದೆಯೇ ಬಳಸುತ್ತಿರುವುದನ್ನು ಕಾಣುತ್ತೇವೆ. ಅವುಗಳ ಬೇರು ಯಾವ ಸಂಸ್ಕೃತಿಯಲ್ಲಿದೆ ಮತ್ತು ಅವುಗಳ ನಿಜವಾದ ಅರ್ಥವೇನು? ಅವುಗಳು ನಮ್ಮ ಸಮಾಜವನ್ನು ಮತ್ತು ಸಂಸ್ಕೃತಿಯನ್ನು ವಿವರಿಸಲು ಅಥವಾ ಅರ್ಥೈಸಲು ಸಹಾಯಕವಾಗಿವೆಯೇ? ಎಂಬುದನ್ನು ತಿಳಿಯದೇ ಬಳಸುತ್ತಿರುತ್ತೇವೆ. ಈ ಮೇಲೆ ಗುರುತಿಸಿದ ಲೇಖನಗಳು ತಿಳಿಸುವಂತೆ, ಒಂದೊಮ್ಮೆ ಬೇರೆ ಬೇರೆ ಸಂಸ್ಕೃತಿಗಳ ನಡುವೆ ವ್ಯತ್ಯಾಸವಿದ್ದು, ಈ ಪರಿಕಲ್ಪನೆಗಳ ಮೂಲ ಬೇರೆ ಸಂಸ್ಕೃತಿಯದಾಗಿದ್ದು, ಅವುಗಳು ಆ ಸಂಸ್ಕೃತಿಯ ಜೀವನಕ್ರಮವನ್ನು ಪ್ರತಿನಿಧಿಸುತ್ತಿದ್ದರೆ, ಅಂತಹ ಪರಿಕಲ್ಪನೆಗಳು ನಮ್ಮ ಸಂಸ್ಕತಿಯನ್ನು ಅರ್ಥೈಸಲು ಸಹಾಯಕವಾಗುತ್ತವೆಯೇ? ಎಲ್ಲಿಯವರೆಗೂ ಈ ಮೇಲಿನ ಅಂಶಗಳಿಗೆ ಮಹತ್ವವನ್ನು ನೀಡುವುದಿಲ್ಲವೋ ಅಲ್ಲಿಯವರೆಗೂ ಸಂಶೋಧನೆಗಳು ನಮ್ಮ ಸಮಾಜ ಹಾಗೂ ಸಂಸ್ಕೃತಿಯ ಕುರಿತಾದ ಸಮರ್ಪಕವಾದ ಜ್ಞಾನವನ್ನು ನೀಡಲು ಸಾಧ್ಯವೇ ಇಲ್ಲ.

ಹಾಗೆಯೇ ಎಲ್ಲಿಯವರೆಗೂ ಒಂದು ಸಮಾಜದ ಕುರಿತಾದ ಸಮರ್ಪಕ ಜ್ಞಾನವು ಸಾಧ್ಯವಿಲ್ಲವೋ ಅಲ್ಲಿಯವರೆಗೂ ಆ ಸಮಾಜದಲ್ಲಿನ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವುದಿರಲಿ, ಕನಿಷ್ಠಪಕ್ಷ ಸಮಸ್ಯೆಯನ್ನು ಸರಿಯಾಗಿ ಗ್ರಹಿಸುವುದೂ ಸಾಧ್ಯವಾಗುವುದಿಲ್ಲ. ಆದ್ದರಿಂದ ನಮ್ಮ ಸಂಶೋಧನೆಗಳು ಸಮಾಜದ ಕುರಿತು ಜ್ಞಾನವನ್ನು ನೀಡುವ ಉದ್ದೇಶವನ್ನು ಹೊಂದಿರಬೇಕೇ ವಿನಾ ಕೇವಲ ಪದವಿಗೋಸ್ಕರ ಆಗಬಾರದು. ಸಂಶೋಧಕರು ಇದನ್ನು ಅರಿತುಕೊಳ್ಳದ ಹೊರತು, ಹಾಗೆಯೇ ಸಂಶೋಧಕರಿಗೆ ಅಂತಹ ವಾತಾವರಣವನ್ನು ನಿರ್ಮಿಸಿಕೊಡದ ಹೊರತು ಸಂಶೋಧನೆಗಳ ಗುಣಮಟ್ಟವನ್ನು ಹೆಚ್ಚಿಸಲು ಸಾಧ್ಯವೇ ಇಲ್ಲ. ಹಾಗಾದರೆ, ಸಂಶೋಧಕರಿಗೆ ಅಂತಹ ವಾತಾವರಣವನ್ನು ಒದಗಿಸಿಕೊಡುವುದು ಹೇಗೆ? ಅದು ಯಾರ ಜವಾಬ್ದಾರಿ?

## ಸಂಶೋಧಕರ ಸಮಸ್ಯೆಗಳು

ಸಂಶೋಧಕರಿಗೆ ಉತ್ತಮ ವಾತಾವರಣವನ್ನು ನಿರ್ಮಿಸಿಕೊಡುವ ಮೂಲಕ ಸಂಶೋಧನೆಯ ಗುಣಮಟ್ಟವನ್ನು ಹೆಚ್ಚಿಸಲು ಸಾಧ್ಯ. ಅದಕ್ಕೆ ಸಂಶೋಧಕರುಗಳಿಗೆ ಯಾವ ಯಾವ ಸಮಸ್ಯೆಗಳು ಎದುರಾಗುತ್ತವೆ ಎಂಬುದನ್ನು ಗುರುತಿಸಿ, ಸಾಧ್ಯವಾದರೆ ಅವುಗಳಿಗೆ ಪರಿಹಾರಗಳನ್ನು ನೀಡುವುದು ಅನಿವಾರ್ಯವಾಗುತ್ತದೆ. ಅಂತಹ ಸಮಸ್ಯೆಗಳನ್ನು ಗುರುತಿಸುವ ಚಿಕ್ಕ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇದಕ್ಕೆ ನಮ್ಮಂತೆ ಕಾರ್ಯಾಗಾರಗಳಿಗೆ ಆಗಮಿಸಿದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ಸಂಶೋಧನಾರ್ಥಿಗಳು ಮತ್ತು ಸಂಶೋಧನಾ ಕ್ಷೇತ್ರಕ್ಕೆ ಕಾಲಿಡಬೇಕೆಂದಿರುವವರು ಹಂಚಿಕೊಂಡ ಅವರ ಅನುಭವ, ಅಭಿಪ್ರಾಯಗಳನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ. ಮುಖ್ಯವಾಗಿ ಮಾರ್ಗದರ್ಶಕರ ಸಮಸ್ಯೆ, ಭಾಷೆಯ ಸಮಸ್ಯೆ, ಸಂಪನ್ಮೂಲಗಳ ಕೊರತೆಗಳನ್ನು ಗುರುತಿಸಲಾಗಿದೆಯಾದರೂ ಇನ್ನೂ ಕೆಲವು ಇವೆ.

## ಸಂಶೋಧನಾ ಸಮಸ್ಯೆಯ ಆಯ್ಕೆ

ಇಂದು ಸಮಾಜ ವಿಜ್ಞಾನದ ಅಧ್ಯಯನ ಶಿಸ್ತುಗಳಲ್ಲಿ ಯಾವ ಸಂಗತಿಯ ಕುರಿತು ಸಂಶೋಧನೆ ಮಾಡಬೇಕು ಎಂಬುದೇ ಅರ್ಥವಾಗುವುದಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಮೂಲಭೂತವಾಗಿ ಸಂಶೋಧನೆಯ ಬಗೆಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದೇ ಆಗಿದೆ.

2 ನೇ ಪುಟ ನೋಡಿ

1ನೇ ಪುಟದಿಂದ

## ....ಕಳಪೆಗೆ ಏನು ಕಾರಣ?

ಸಂಶೋಧನೆಯನ್ನು ಕೇವಲ ಪದವಿ ಪಡೆಯುವ ಸಲುವಾಗಿ ಮಾಡಬೇಕಾ ಇಲ್ಲವೆ ಯಾವುದಾದರೂ ಕ್ಷೇತ್ರದಲ್ಲಿ ಜ್ಞಾನವನ್ನು ಸಂಪಾದಿಸಲು ಮತ್ತು ಉತ್ಪಾದಿಸಲು ಮಾಡಬೇಕಾ ಎಂಬುದರ ಕುರಿತು ಸ್ಪಷ್ಟ ಅರಿವು ಇಲ್ಲದಿರುವುದನ್ನು ನೋಡಬಹುದು. ಬಹುತೇಕ ಸಂಶೋಧನೆಗಳು ಕೇವಲ ಪದವಿಗೋಸ್ಕರ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಯಾವುದೋ ಒಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಆ ಕುರಿತು ಮಾಹಿತಿ ಸಂಗ್ರಹಿಸಿ ಒಂದು ಪ್ರಬಂಧವನ್ನು ತಯಾರಿಸುತ್ತಾರೆ. ಉದಾಹರಣೆಗೆ, ಸಂಶೋಧನಾರ್ಥಿಗಳು ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಾದರೆ, ಪಂಚಾಯಿತಿ ವ್ಯವಸ್ಥೆಯ ಯಾವುದಾದರೂ ಸರ್ಕಾರಿ ಯೋಜನೆಯೊಂದನ್ನು ಅಧ್ಯಯನಕ್ಕೆ ಒಳಡಿಸುತ್ತಾರೆ (ಹಾಗೆಯೇ ಅರ್ಥಶಾಸ್ತ್ರ, ಸಮಾಜ ಶಾಸ್ತ್ರ ಸಂದರ್ಭದಲ್ಲಿಯೂ). ಇಂತಹ ಸಂಶೋಧನೆಗಳ ಬಹುಮುಖ್ಯ ಕೆಲಸ ಕೇವಲ ಮಾಹಿತಿ ಸಂಗ್ರಹಿಸುವುದಾಗಿರುತ್ತದೆ. ಆದರೆ ಅವುಗಳನ್ನು ಸಂಶೋಧನೆಗಳೆಂದು ಕರೆಯುವುದು ಸಮಂಜಸವೇ ಎನ್ನುವ ಪ್ರಶ್ನೆ ಏಳುತ್ತದೆ. ಏಕೆಂದರೆ ಅಂತಹ ಕೆಲಸವನ್ನು ಈಗಾಗಲೇ ಆಯಾ ಇಲಾಖೆ/ ಯೋಜನೆಗೆ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳು, ಹಾಗೆಯೇ ಕೆಲವೊಮ್ಮೆ ಪತ್ರಿಕೆಗಳೂ ವರದಿ ಮಾಡಿರುತ್ತವೆ. ಇಂತಹವು ಎಷ್ಟರ ಮಟ್ಟಿಗೆ ಸಂಶೋಧನೆಯ ಗುಣಮಟ್ಟದ ಕುರಿತು ಕಾಳಜಿ ವಹಿಸಲು ಸಾಧ್ಯ? ಇಲ್ಲಿ ಕೇವಲ ಸಂಶೋಧಕರನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ನಮ್ಮ ವ್ಯವಸ್ಥೆಯ ಪಾಲೂ ಅಷ್ಟೇ ಇದೆ ಎಂಬುದು ಮುಖ್ಯವಾಗುತ್ತದೆ.

ಸಮಾಜ ವಿಜ್ಞಾನಗಳಲ್ಲಿ, ಸಂಶೋಧನಾ ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳುವಾಗ ಸಮಸ್ಯೆಯ ಆಯ್ಕೆ ಮತ್ತು ಅದರ ಸ್ವರೂಪವನ್ನು ಗುರುತಿಸುವುದು ಮಹತ್ವದ್ದಾಗಿದೆ. ನಮ್ಮ ಸಂಶೋಧನೆಗಳು ಸಮಾಜದ ಸಮಸ್ಯೆಗಳನ್ನು ಅರ್ಥೈಸಲು ಮತ್ತು ಆ ಮೂಲಕ ಪರಿಹಾರ ಸೂಚಿಸಲು ಒಂದು ವಿವರಣಾ ಚೌಕಟ್ಟನ್ನು ಒದಗಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಹಾಗೆಂದು ಸಮಾಜದ ಸಮಸ್ಯೆಗಳು ಸಂಶೋಧನೆಗೆ



ಮುಖ್ಯವೇ ಅಲ್ಲ ಎಂಬುದು ಈ ಮಾತಿನ ಇಂಗಿತವಲ್ಲ. ಬದಲಾಗಿ ಆ ಸಮಸ್ಯೆಯನ್ನು ಈ ಮುಂಚಿನ ಅಧ್ಯಯನಗಳು ಹೇಗೆ ಗ್ರಹಿಸಿವೆ ಎಂಬುದನ್ನೂ, ಅವುಗಳಲ್ಲಿನ ಸಮಸ್ಯೆಗಳೇನು ಎಂಬುದನ್ನೂ ಗುರುತಿಸುವ ಮೂಲಕ ಬೇರೆ ಬೇರೆ ಆಯಾಮಗಳಲ್ಲಿ ಆ ಸಮಸ್ಯೆಯನ್ನು ವಿಶ್ಲೇಷಿಸಿ, ಸಮಸ್ಯೆಯ ಮೂಲವನ್ನು ಗ್ರಹಿಸಿ ಸಮರ್ಪಕವಾದ ಕಾರಣವನ್ನು, ಪರಿಹಾರವನ್ನು ಸೂಚಿಸಲು ಸಾಧ್ಯವಾಗಬೇಕು.

### ಸೈದ್ಧಾಂತೀಕರಿಸುವ ಸಮಸ್ಯೆ

ಯಾವುದೇ ವಿಷಯದ ಕುರಿತು ಆಳವಾದ ಅಧ್ಯಯನ ಮಾಡಿ ಅದರಲ್ಲಿರುವ ಸಮಸ್ಯೆಗಳನ್ನು ಗುರುತಿಸಿದರೂ, ಅವುಗಳನ್ನು ಸೈದ್ಧಾಂತೀಕರಿಸುವುದು ಸಾಧ್ಯವಾಗುತ್ತಿಲ್ಲ. ಒಂದು ವಿಷಯವನ್ನು ಸೈದ್ಧಾಂತಿಕವಾಗಿ ವಿವರಿಸುವ ಕಾರ್ಯವು ನಮಗೆ ಅಭ್ಯಾಸವಿಲ್ಲದಿರುವುದೂ ಈ ವೈಫಲ್ಯಕ್ಕೆ ಕಾರಣವಾಗಿದೆ. ಹಾಗೆಂದು ಸಂಶೋಧಕರಾಗಿ ಅದನ್ನು ರೂಢಿಸಿಕೊಳ್ಳದಿದ್ದರೆ/ಕಲಿಯದಿದ್ದರೆ ನಮ್ಮ ಮೂರ್ಖತನವಾಗುತ್ತದೆಯಷ್ಟೇ. ಇಲ್ಲಿ ಮುಖ್ಯವಾಗಿ ಎದ್ದು ಕಾಣುವುದೆಂದರೆ, ನಾವು ಆಯ್ಕೆ ಮಾಡಿಕೊಂಡ ಸಂಶೋಧನಾ ವಿಷಯವನ್ನು ಕುರಿತು ಯಾವ ಸಿದ್ಧಾಂತದ ಹಿನ್ನೆಲೆಯಲ್ಲಿ ಈ ಹಿಂದೆ ಅಧ್ಯಯನಗಳು ನಡೆದಿವೆ ಎನ್ನುವ ಜ್ಞಾನದ ಕೊರತೆ. ಅಂತಹ ಅಧ್ಯಯನಗಳಲ್ಲಿನ ದೋಷಗಳನ್ನು ಗುರುತಿಸಿ ನಮ್ಮ ಅಧ್ಯಯನವು ಹೇಗೆ ಅವುಗಳಿಗಿಂತ ಉತ್ತಮ ಎಂಬುದನ್ನು ಸೈದ್ಧಾಂತೀಕರಿಸಬೇಕಾಗುತ್ತದೆ. ಇದರ ಅನುಪಸ್ಥಿತಿಯನ್ನು ನಮ್ಮ ಬಹುತೇಕ ಸಂಶೋಧನೆಗಳಲ್ಲಿ ಕಾಣುತ್ತೇವೆ. ಇಂತಹ ಸಂದರ್ಭದಿಂದ ಹೊರಬರಬೇಕಾದ ತುರ್ತು ಇಂದು ನಮ್ಮಂತಹ ಸಂಶೋಧಕರ ಮುಂದಿದೆ.

ಪ್ರಸ್ತುತ ನಾವು ನಡೆಸುತ್ತಿರುವ ಸಂಶೋಧನೆಗಳಲ್ಲಿ ಎದುರಾಗುವ ಸಮಸ್ಯೆಗಳ ಕುರಿತು ಚರ್ಚೆ ಮಾಡಲು 'ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ'ವು ಬ್ಲಾಗ್‌ವೊಂದನ್ನುಆರಂಭಿಸಿದೆ (http://cslcku.wordpress.com/). ಕರ್ನಾಟಕದಾದ್ಯಂತ ಸಂಶೋಧನೆಯಲ್ಲಿ ತೊಡಗಿರುವವರು ತಮ್ಮ ಅನುಭವ, ಅಭಿಪ್ರಾಯ ಮತ್ತು ಅವಶ್ಯಕತೆಗಳನ್ನು ಈ ಬ್ಲಾಗ್‌ನಲ್ಲಿ ಇತರೆ ಸಂಶೋಧಕರೊಂದಿಗೆ ಹಂಚಿಕೊಳ್ಳಬಹುದು. ಈ ರೀತಿಯಾಗಿ ಸಂಶೋಧಕರೆಲ್ಲರೂ ಸೇರುವಂತಾಗಿ, ಪರಸ್ಪರ ವಿಚಾರ ವಿನಿಮಯ ಸಾಧ್ಯವಾದರೆ, ಕರ್ನಾಟಕದಲ್ಲಿ ಸಂಶೋಧನಾ ವಾತಾವರಣವನ್ನೇ ಬದಲಿಸಬಹುದು. ಈ ಮೂಲಕ ಸಂಶೋಧನೆಯ ಗುಣಮಟ್ಟ ಕಳಪೆಯಾಗುತ್ತಿದೆ ಎಂಬ ಕೂಗು ನಿಲ್ಲುವಂತೆ ಮಾಡಬಹುದು. ■

(ಲೇಖಕರು ಸಂಶೋಧನಾರ್ಥಿಗಳು, ಕುವೆಂಪು ವಿ.ವಿ.)

1ನೇ ಪುಟದಿಂದ

## ಶಿಕ್ಷಣ ಸಾಲ....

### ಸಾಲ ಪಡೆಯುವ ವಿದ್ಯಾರ್ಥಿಗಳ ಅರ್ಹತೆ

- ಭಾರತದ ಪ್ರಜೆಯಾಗಿರಬೇಕು.
- 18 ವಯಸ್ಸು ಆಗಿರಬೇಕು. 18ಕ್ಕಿಂತ ಕಡಿಮೆ ವಯಸ್ಸಿನವರು ತಂದೆ ತಾಯಿಗಳ ಅಥವಾ ಗಾರ್ಡಿಯನ್ ಮುಖಾಂತರ ವ್ಯವಹರಿಸಬಹುದು.
- ಸಾಲ ನೀಡುವ ಬ್ಯಾಂಕ್ ಶಾಖೆಯ ಸರಹದ್ದಿನಲ್ಲಿ ಖಾಯಂ ವಾಸವಾಗಿದ್ದು, ರೇಶನ್ ಕಾರ್ಡ್‌ನಂತಹ ದಾಖಲೆ ಪತ್ರ ಒದಗಿಸಬೇಕು.
- ವಿದ್ಯಾರ್ಥಿ ಬಯಸುವ ಕೋರ್ಸಿಗೆ ಅರ್ಹತೆ ಪಡೆದಿರಬೇಕು.

### ಎರಡು ವಿಧದ ಸಾಲಗಳು

ಶಿಕ್ಷಣ ಸಾಲದಲ್ಲಿ ಎರಡು ವಿಧಗಳಿವೆ. ಭಾರತದಲ್ಲಿ ವ್ಯಾಸಂಗ, ಹಾಗೂ ವಿದೇಶದಲ್ಲಿ ವ್ಯಾಸಂಗ. ಈ ಎರಡೂ ವ್ಯಾಸಂಗಕ್ಕೆ ಬ್ಯಾಂಕುಗಳಲ್ಲಿ ಸಾಲ ದೊರೆಯುತ್ತದೆ.

### ಭಾರತದಲ್ಲಿ ವ್ಯಾಸಂಗ ಮಾಡಲು ಸಾಲಕ್ಕೆ ಅರ್ಹತೆ ಇರುವ ಕೋರ್ಸುಗಳು

- ಬಿ.ಎ. ಬಿ.ಎಸ್ಸಿ, ಬಿ.ಕಾಂ ಮುಂತಾದ ಪದವಿಗಳು.
- ಸ್ನಾತಕೋತ್ತರ ಕೋರ್ಸುಗಳು. ಎಂ.ಎ, ಎಂ.ಎಸ್ಸಿ, ಎಂ.ಕಾಂ ಮುಂತಾದ ಕೋರ್ಸುಗಳು.
- ವೃತ್ತಿಪರ ಕೋರ್ಸುಗಳು. ಎಂಜಿನಿಯರಿಂಗ್, ಮೆಡಿಕಲ್, ಡೆಂಟಲ್, ಕೃಷಿ, ಕಾನೂನು, ಮೆನೇಜ್‌ಮೆಂಟ್, ಕಂಪ್ಯೂಟರ್ ಮೊದಲಾದವು.

ICWA, IIT, IISc, XLRI, NIFT, ACA, CFA, ACS ಹಾಗೂ ನರ್ಸಿಂಗ್, ವಾಣಿಜ್ಯ ವಿಮಾನ ತರಬೇತಿ, ಶಿಕ್ಷಕರ ತರಬೇತಿ ಕೋರ್ಸುಗಳು ಮತ್ತು UGC/GOVT/AICTE/AIBMS ಗಳಿಂದ ಅನುಮೋದಿತ ಕಾಲೇಜು/ ವಿಶ್ವವಿದ್ಯಾಲಯಗಳು ನಡೆಸುವ ಡಿಪ್ಲೊಮಾ/ ಡಿಗ್ರಿಗಳು.

### ವಿದೇಶದಲ್ಲಿ ವ್ಯಾಸಂಗ ಮಾಡಲು ಸಾಲಕ್ಕೆ ಅರ್ಹತೆ ಇರುವ ಕೋರ್ಸುಗಳು

- ಖ್ಯಾತ ವಿಶ್ವವಿದ್ಯಾಲಯಗಳ ಉದ್ಯೋಗೋನ್ಮುಖ ವೃತ್ತಿಪರ/ ತಾಂತ್ರಿಕ ಕೋರ್ಸುಗಳು.
- ಸ್ನಾತಕೋತ್ತರ: MCA,MBA, M.S., CIMS (London), CPA (USA) ಕೋರ್ಸುಗಳು

### ದೊರೆಯಬಹುದಾದ ಸಾಲದ ಮೊತ್ತ

- ಭಾರತದಲ್ಲಿ ಅಧ್ಯಯನಕ್ಕೆ: ರೂ. 10ಲಕ್ಷಗಳ ತನಕ.
- ವಿದೇಶದಲ್ಲಿ ಅಧ್ಯಯನಕ್ಕೆ: ರೂ. 20ಲಕ್ಷಗಳ ತನಕ.

ವಿ. ಸೂ: ಹೆಚ್ಚಿನ ಭದ್ರತೆ ಒದಗಿಸಿದರೆ ಮೇಲಿನ ಮಿತಿಗಿಂತಲೂ ಹೆಚ್ಚಿನ ಸಾಲ ಪಡೆಯಬಹುದು. ಸಾಲ ಪಡೆಯುವ ಸೇವಾ ಶುಲ್ಕ (ಪ್ರೊಸೆಸಿಂಗ್ ಚಾರ್ಜ್‌ಗಳು) ಶಿಕ್ಷಣ ಸಾಲಕ್ಕೆ ಇರುವುದಿಲ್ಲ.

ಸಾಲದ ಮಾರ್ಜಿನ್‌ವಿದ್ಯಾರ್ಥಿ ಪಡೆಯುವ ಸಾಲದ ಮೊತ್ತದ ಶೇ. 5ರಿಂದ 15ರ ತನಕ ವಿದ್ಯಾರ್ಥಿಯ ತಂದೆ ತಾಯಿಗಳು ಭರಿಸಬೇಕಾಗುತ್ತದೆ. ಉಳಿದ ಹಣ ಸಾಲವಾಗಿ ಪಡೆಯಬಹುದು.

### ಶಿಕ್ಷಣ ಸಾಲ ಪಡೆಯಲು ಬ್ಯಾಂಕುಗಳಿಗೆ ಸಲ್ಲಿಸಬೇಕಾದ ಕಾಗದ ಪತ್ರಗಳು

- ಪಾಸ್ ಪೋರ್ಟ್ ಅಳತೆಯ ಎರಡು ಭಾವಚಿತ್ರಗಳು.
- ಉತ್ತೀರ್ಣವಾದ ಪರೀಕ್ಷೆಯ ಅಂಕ ಪಟ್ಟಿ.
- ಉತ್ತೀರ್ಣವಾದ ಕಾಲೇಜು/ ಸ್ಕೂಲ್‌ನಿಂದ ಗುಣ ನಡತೆ ಸರ್ಟಿಫಿಕೇಟು.
- ಜನ್ಮ ತಾರೀಕಿನ ಪುರಾವೆ.
- ಉನ್ನತ ವ್ಯಾಸಂಗಕ್ಕೆ ದೊರೆತ ಸಮ್ಮತಿ ಪತ್ರ.
- ಹೆತ್ತವರ ಜಾಮೀನು.

### ವಿದೇಶದ ವ್ಯಾಸಂಗವಾದಲ್ಲಿ

- ಪಾಸ್‌ಪೋರ್ಟ್ ಕಾಪಿ,
- ವೀಸಾ ಕಾಪಿ,
- ವಿದೇಶಿ ವಿನಿಮಯ ಪರ್ಮಿಟ್
- ವಿದೇಶದ ವಿದ್ಯಾಲಯದಲ್ಲಿ ಓದಲು ದೊರೆತ ಅನುಮತಿ ಪತ್ರ.

ಶಿಕ್ಷಣ ಸಾಲದ ಬಡ್ಡಿ ದರ ಆಯಾಯ ಬ್ಯಾಂಕುಗಳು ನಿರ್ಧರಿಸಿದಂತಿರುತ್ತದೆ. ವಿದ್ಯಾರ್ಥಿಯ ತಂದೆ ತಾಯಿಗಳು ಸಾಲ ಪಡೆದ ನಂತರ, ಸಾಲದ ಬಡ್ಡಿಯನ್ನು ಕಾಲ ಕಾಲಕ್ಕೆ ತುಂಬುತ್ತಾ ಬರಬೇಕು. ಒಂದು ವೇಳೆ ಇದು ಅಸಾಧ್ಯವಾದಲ್ಲಿ ಸಾಲ ನೀಡಿದ ಬ್ಯಾಂಕು ವಿಧಿಸುವ ಕಾಲ ಕಾಲದ ಬಡ್ಡಿ, ಬೇರೆ ತೆಗೆದಿಟ್ಟು (ಫಂಡಿಂಗ್ ಸಿಸ್ಟಂ) ಅಸಲಿಗೆ ಸೇರಿಸದೆ, ಕೊನೆಯಲ್ಲಿ ವಸೂಲು ಮಾಡುತ್ತಾರೆ. ಈ ಹಿಂದೆ ತಿಳಿಸಿದಂತೆ, ದುರ್ಬಲ ವರ್ಗದ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಅವಧಿ ಮುಗಿದ ನಂತರ ಒಂದು ವರ್ಷ ಇಲ್ಲವೇ ಉದ್ಯೋಗ ಪಡೆದು ಆರು ತಿಂಗಳವರೆಗೆ ಬಡ್ಡಿ ಪಾವತಿ ಮಾಡುವ ಅವಶ್ಯವಿಲ್ಲ. (ದೇಶದ ಯಾವುದೇ ಮಾನ್ಯತೆ ಪಡೆದ ತಾಂತ್ರಿಕ ಮತ್ತು ವೃತ್ತಿ ಶಿಕ್ಷಣದಲ್ಲಿ ಅನುಮೋದನೆ ಪಡೆದ ತರಗತಿಗಳಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಲು ಪಡೆಯುವ ಸಾಲಕ್ಕೆ ಈ ಸಬ್ಸಿಡಿ ಅನ್ವಯಗೊಳ್ಳುವುದು). ಇದೇ ರೀತಿ ಸಾಲದ ಮರುಪಾವತಿ ಕೂಡಾ ವಿದ್ಯಾಭ್ಯಾಸದ ಅವಧಿ ಮುಗಿದ ನಂತರ ಒಂದು ವರ್ಷ ಇಲ್ಲವೇ ಉದ್ಯೋಗ ಪಡೆದ ಆರು ತಿಂಗಳ ಒಳಗೆ ಪ್ರಾರಂಭಿಸಬೇಕು. ಸಾಲ ಮರುಪಾವತಿಯ ಅವಧಿ 60–84 ತಿಂಗಳು ಇರುತ್ತವೆ. ಆದರೆ ಅವಧಿಗೆ ಮುನ್ನ ಸಾಲ ತೀರಿಸುವ ಹಕ್ಕು ಸಾಲಗಾರರಿಗೆ ಸದಾ ಇರುತ್ತದೆ.

ಸಾಲದ ಮೊತ್ತ ಒಮ್ಮೆಲೇ ವಿದ್ಯಾರ್ಥಿ ಪಡೆಯುವಂತಿಲ್ಲ. ಅವಶ್ಯಕತೆಗನುಗುಣವಾಗಿ, ಉದಾಹರಣೆಗೆ ಕಾಲೇಜು ಫೀಸು, ಪುಸ್ತಕ, ಉಪಕರಣ ಖರೀದಿ ಮತ್ತು ಹಾಸ್ಟೆಲ್ ಬಿಲ್ಲು ಹೀಗೆ ಹಂತ ಹಂತವಾಗಿ ಹಣ ಬಿಡುಗಡೆ ಮಾಡುತ್ತಾರೆ. ಇದೇ ರೀತಿ ಪಡೆದಷ್ಟು ಹಣ ತಾರೀಕು ಲೆಕ್ಕ ಹಾಕಿ, ಬಡ್ಡಿ ವಿಧಿಸುತ್ತಾರೆ. ಇದರಿಂದ ಬಡ್ಡಿ ಕಡಿಮೆಯಾಗುತ್ತದೆ, ಜತೆಗೆ ಸಾಲದ ದುರುಪಯೋಗವಾಗುವುದಿಲ್ಲ.

ಶಿಕ್ಷಣ ಸಾಲವನ್ನು, ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಪಡೆದು ಸಕಾಲದಲ್ಲಿ ಬ್ಯಾಂಕಿಗೆ ಹಿಂತಿರುಗಿಸಿದಲ್ಲಿ ಇನ್ನೂ ಹೆಚ್ಚಿನ ಸಾಲ ಮುಂದಿನ ದಿವಸಗಳಲ್ಲಿ ಮುಂದಿನ ಜನಾಂಗಕ್ಕೆ ದೊರೆಯುತ್ತದೆ. ವಿದ್ಯಾಭ್ಯಾಸದ ಸಾಲಕ್ಕೆ ತೆರುವ ಬಡ್ಡಿ ಸೆಕ್ಷನ್ 80 ಇ ಆದಾಯ ತೆರಿಗೆ ಪ್ರಕಾರ, ಆದಾಯ ತೆರಿಗೆಯಿಂದ ವಿನಾಯಿತಿ ಪಡೆಯಬಹುದು. ಭಾರತ ಸರ್ಕಾರದ 'ಬಡ್ಡಿ ಸಬ್ಸಿಡಿ' ಬಡವರಿಗೆ ಬಹು ದೊಡ್ಡ ಕೊಡುಗೆ. ಶಿಕ್ಷಣ ಸಾಲ, ದೀರ್ಘಾವಧಿ ಹೂಡಿಕೆ ಇದ್ದಂತೆ. ■